ಕರ್ನಾಟಕ ವಿಧಾನ ಸಭೆ

ಶುಕ್ರವಾರ, 26ನೇ ಆಗಸ್ಟ್ 1983/ಭಾದ್ರಪದ 4, 1905
ವಿಧಾನ ಸೌಧದಲ್ಲಿರುವ ವಿಧಾನಸಭಾ ಸಭಾಂಗಣದಲ್ಲಿ
ಸದನವು ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು

ಮಾನ್ಯ ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೆ ಗೌಡರು) ಅಧ್ಯಕ್ಷ ಪೀಠವನ್ನಲಂಕರಿಸಿದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಕೊಡಲಾದ ಉತ್ತರಗಳು

ವಿಷಯ :– ಗ್ರಾಮ ಪಂಚಾಯಿತಿಯ ಸಹಕಾರ ಸಂಘಗಳು

ಪ್ರ. 163(107) ಶ್ರೀ ಬಿ. ಜೆ. ಬಣಕಾರ್ (ಹಿರೇಕೆರೂರು). — ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಗ್ರಾಮ ಸೇವಾ ಪತ್ತಿನ ಸಹಕಾರ ಸಂಘಗಳನ್ನು ಯಾವ ಆಧಾರದ ಮೇಲೆ ಈಗಿನ ಸಂಘಗಳನ್ನು ಮುಂದುವರಿಸಲಾಗುವುದು ಇಲ್ಲದೆ ಹೆಚ್ಚು ಕಡಿಮೆ ಬದಲಿ ಮಾಡಲಾಗುವುದು;

ಆ. ಸಂಘಗಳ ಕಾರ್ಯದರ್ಶಿಗಳ ಹಾಗೂ ಸಿಬ್ಬಂದಿಗಳಿಗೆ ಸರಕಾರದವರು ಗೊತ್ತುಪಡಿಸಿರುವ ಸಂಬಳ ಭತ್ಯೆ ಇತ್ಯಾದಿ ಸವಲತ್ತುಗಳೇನು ;

ಇ. ಪ್ರತಿಯೊಂದು ಸಹಕಾರ ಸಂಘಕ್ಕೆ ಒಬ್ಬ ಶಿಪಾಯಿ ಒಬ್ಬ ಗುಮಾಸ್ತ ಹಾಗೂ ಕಾರ್ಯದರ್ಶಿಗಳ ಸೇವೆ ಅತ್ಯಗತ್ಯವೆಂಬುದನ್ನು ಸರಕಾರ ಅರಿತಿದ್ದಾರೆಯೆ ; ಹಾಗಿದ್ದರೆ ಈ ಬಗ್ಗೆ ಸರಕಾರ ಯಾವ ಕ್ರಮ ತೆಗೆದುಕೊಂಡಿದೆ ;

ಈ. ಸಹಕಾರ ಸಂಘಗಳ ಅನೇಕ ಕಾರ್ಯದರ್ಶಿಗಳ ಪಗಾರ ನಾಲ್ಕನೇ ದರ್ಜೆಯ ಸರಕಾರಿ ನೌಕರರಿಗಿಂತ ಕಡಿಮೆ ಇರುವ ಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಕೈಗೊಂಡಿರುವ ಕ್ರಮವೇನು ?

ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಅ. ಭಾರತೀಯ ರಿಜರ್ವ್ ಬ್ಯಾಂಕಿನ ಮಾರ್ಗ ಸೂಚಿ ಆಧಾರದ ಮೇಲೆ ಪತ್ತಿನ ಸಹಕಾರ ಸಂಘಗಳು ಪುನರ್ ವಿಂಗಡಿಸಿದ್ದು ಯಾವ ಬದಲಾವಣೆ ಯಿಲ್ಲದೆ ಹಾಗೆಯೇ ಮುಂದುವರಿಸಲಾಗಿದೆ.

ಆ. ಸರಕಾರ ಗೊತ್ತುಪಡಿಸಿರುವ ಸಂಬಳ ಬತ್ಯೆ ಇತ್ಯಾದಿ ವಿವರವನ್ನು ಲಗತ್ತಿಸಿರುತ್ತೆ (ಅನುಬಂಧ ಎ).

ಇ. ಯಾವ ಯಾವ ಶ್ರೇಣಿಯ ಸಹಕಾರಿ ಸಂಘಕ್ಕೆ ಏನು ಸಿಬ್ಬಂದಿ ಬೇಕೆನ್ನುವುದನ್ನು ಆಲೋಚಿಸಿ, ಸರ್ಕಾರ ಒಂದು ಆದೇಶವೊರಡಿಸಿದೆ ಅದರ ಕಾಪಿಯನ್ನು ಇದಕ್ಕೆ ಲಗತ್ತಿಸಿದೆ. ಅದರಂತೆ ಎಲ್ಲಾ ಸಹಕಾರಿ ಸಂಘಗಳಿಗೆ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಸೂಕ್ತ ಆದೇಶ ನೀಡಲಾಗಿದೆ.

ಈ. ವೇತನ ಶ್ರೇಣಿ ನೀಡುವಾಗ, ಸಂಘದ ದುಡಿಯುವ ಬಂಡವಾಳ ಹಾಗೂ ನೌಕರರಿಗೆ ಪಗಾರ ಇತ್ಯಾದಿ ನೀಡಲು ಶಕ್ತಿಯುತವಾಗಿದೆಯೇ ಇಲ್ಲವೇ ಎಂಬುದನ್ನು ಗಮನದಲ್ಲಿಟ್ಟುಕೊಂಡು ಸಂಘಗಳನ್ನು ನಾಲ್ಕು ಶ್ರೇಣಿಯಲ್ಲಿ ವಿಂಗಡಿಸಿ ನೌಕರರ ಅಗತ್ಯವನ್ನು ಮತ್ತು ಪ್ರತಿ ಶ್ರೇಣಿಗೆ ತಕ್ಕಂತೆ ವೇತನ ಶ್ರೇಣಿಯನ್ನು ನಿಗದಿ ಪಡಿಸಿರುತ್ತೆ. ಇದರಂತೆ ನಾಲ್ಕನೇ ಶ್ರೇಣಿಯ ಸಂಘಗಳ ಕಾರ್ಯದರ್ಶಿಗಳಿಗೆ ಮಾತ್ರ ಸರ್ಕಾರದ ನಾಲ್ಕನೇ ದರ್ಜೆ ನೌಕರರಿಗಿಂತ ಕಮ್ಮಿ ಸಂಬಳ ನೀಡಲಾಗಿದೆ.

PROCEEDINGS OF THE GOVERNMENT OF KARNATAKA

Subject : Service conditions of the employees of the Primary Agricultural Credit Co-operative Societies in Karnataka–Revision of pay Scales–regarding.

Read : 1. G.O. No. RDC 72 CLM 80 dated 17-2-81.
2. Memorandum dated 24-2-82 of the Karnataka State Primary Agricultural Credit Co-operative Societies Employees Union, Dharwar.

3. G.O. No. RDC 6 CLM 82 dated 2-8-82.
4. Report of the Committee to suggest new pay scales to the employees of PACS in the State furnished by the Chairman of the Committee under letter No. 8171/82-83 dated 2-11-82.

Preamble :

Government in its order No. RDC 72 CLM 80 dated 17-2-81 had accorded approval for prescribing various pay scales and cadre strength of the employees of the Primary Agricultural Credit Co-operative Societies in Karnataka subject to certain conditions.

The Karnataka State Primary Agricultural Credit Co-operative Societies employees union, Dharwar in their memorandum cited at reference (2) above had represented putting forth certain grievances.

The Government, in its order at reference (3) above had constituted a small committee with the Managing Director, Karnataka State Co-operative Apex Bank Limited, Bangalore as Chairman, to look into the grievances of the employees and to suggest pay scales keeping in view of the work load of each class or society/societies. The Committee had submitted its report on 2-11-1982 suggesting revision of pay scales and grant of certain allowances to the employees of the primary agricultural credit co-operative societies. In the meeting held in the chambers of the Minister for Co-operation on 26-4-83, the demands of the representative of the Union of the employees of primary agricultural credit co-operative societies were discussed with the representatives of the union, when Secretary, Rural Development and Co-operation, Registrar of Co-operative Societies, Bangalore, Deputy Secretary, Finance Department, Managing Director, Apex Bank. Joint Registrar of Co-operative Societies (Credit) Bangalore were present. The Deputy Secretary, Finance Department had suggested different set of pay scales for 3 different categories of employees of Primary Agricultural Credit Co-operative Societies for consideration. In the said meeting, the following decisions were made.

1. The Pay Scales suggested by the Finance Department may be agreed to with DA as and when announced by Government to its employees subject to financial position of the Co-operative Societies.
2. The pay scales may be given effect to wef 1-7-82 which includes DA. If any DA falls due thereafter such DA should be given on par with all Government employees subject to the willingness to pay such enhanced DA by the Co-operative Societies and also their financial position. In respect of the societies having working capital of less than Rs. 3 lakhs the following consolidated pay may be agreed to Rs. 300/- per month to the Secretary, Rs. 125/- per month to peon/Attender.

Government felt it necessary in the interest of employees of the Primary Agricultural Credit Co-operative Societies to sanction revised pay scales and DA to them.

ORDER NO. RDC 6 CLM 82, BANGALORE: 23rd June 1983

Government are pleased to sanction the revised pay scales to the employees of the Primary Agricultural Credit Co-operative Societies classified into 4 Categories on the basis of working capital in Karnataka State with effect from 1-8-83 as indicated in the annexure to this Government order subject to the following conditions :-

1. The staff employed in violation of the cadre strength approved by the Registrar of Co-operative Societies shall be examined by the authorities concerned with reference to the cadre strength of the institutions.
2. If any appointment was made within the cadre strength approved, such cases shall be considered and their services be regularised.
3. To qualify for the revised pay scales the employees of the Primary Agricultural Credit Co-operative Societies shall be allowed a time limit of three years for acquiring the necessary qualification.
4. The employees appointed prior to 9-3-79 shall be exempted from acquiring minimum qualification of SSLC. However, they are required to undergo successfully in co-operative training to eligible for revised scale of pay.
5. If any employee does not qualify himself within this period, he should be continued in his own pay scale.
6. If any DA falls due such DA shall be given on par with all Government employees subject to the financial position of the Co-operative Societies and to the willingness to pay such enhanced DA by the Co-operative Societies.
7. There shall be no extra commitment on the part of the State Government by the implementation of these revised pay scales.

This order issues with the concurrence of Finance Department vide their No. FD 933 Exp. II 83. dated 17-6-83.

By Order and in the name of the
Governor of Karnataka,
Sd/-
(K.V. VITTAL RAO).
Officer on Special Duty
Rural. Devt. &. Co-opn. Department.

To :-

The Compiler, Karnataka Gazette for publication in the next issue of Gazette and supply 300 copies.

The Registrar of Co-operative Societies, Bangalore.

The Chief Auditor of Co-operative Societies, Bangalore.

The Director of Sugar and Additional Registrar of Co-operative Societies, Bangalore.

The Joint Registrar of Co-operative Societies, Bangalore/ Mysore/Belgaum/Gulbarga Division.

The Deputy Registrar of Co-operative Societies, of all Districts. The Assistant Registrar of Co-operative Societies of all sub-divisions

The President, Karnataka State Primary Agricultural Credit Co-operative Societies Employees Union, Dharwar.

Cooperation B, C, D, and E Section of Rural Development and Co-operation Department.

Section Guard File.

ANNEXURE-A

TO G.O. NO. RDC 6 CLM 82 Dt. 23-6-83

Sl. No.	Working Capital	Cadre	Pay scale
		CATEGORY-I	
1.	Exceeding Rs. 12 lakhs	Secretary	Rs. 630-20-650-25-800-30-950-50-1200
		Accountant	Rs. 490-15-550-20-650-25-800-30-950
		Clerk-cum-Salesman	Rs. 410-10-460-15-550-20-650-25-700
		Peon	Rs. 390-5-410-10-460-15-550.
		CATEGORY-II	
	Rs. 7.5 lakhs upto Rs. 12 lakhs	Secretary	Rs. 490-15-550-20-650-25-800-30-950
		Clerk-cum-Salesman	Rs. 410-10-460-15-550-20-650-25-700
		Peon	Rs. 390-5-410-10-460-15-550
		CATEGORY-III	
	Rs. 3 lakhs upto Rs. 7.5 lakhs	Secretary	Rs. 410-10-460-15-550-20 650-25-700
		Peon	Rs. 390-5-410-10-460-15-550
		CATEGORY-IV	
	Less that Rs. 3.00 lakhs	Secretary	Rs. 300 per month (consolidated remuneration)
		Peon	Rs. 125 per month (consolidated remuneration)

Sd/-
(K.V. VITTAL RAO)
Officer on Special Duty
Rural. Devt. &. Co-opn. Dapartment.

ಶ್ರೀ ಬಿ.ಜಿ. ಬಣಕಾರ್.—ಸಹಕಾರ ಸಂಘಗಳನ್ನು ನಾಲ್ಕು ಶ್ರೇಣಿಯಲ್ಲಿ ವಿಂಗಡಿಸಿದ್ದೀರಿ. ಇದರಲ್ಲಿ ಎಷ್ಟು ಸಂಘಗಳು ಬರುತ್ತವೆ, ಎಷ್ಟು ಸಂಘಗಳು ಲಾಭದಲ್ಲಿ ನಡೆಯುತ್ತಿವೆ, ಮತ್ತು ಎಷ್ಟು ನಷ್ಟದಲ್ಲಿ ನಡೆಯುತ್ತಿವೆ.

ಶ್ರೀ ಆರ್.ಎಲ್. ಜಾಲಪ್ಪ.—ಆ ವಿವರಗಳು ನನ್ನಲ್ಲಿಲ್ಲ. ಬೇಕಾದರೆ ಆಮೇಲೆ ಒದಗಿಸಿ ಕೊಡುತ್ತೇನೆ.

ಶ್ರೀ ಬಿ.ಜಿ. ಬಣಕಾರ್.—ಸಹಕಾರ ಸಂಘಗಳಿಗೆ ಹಳ್ಳಿಯ ರೈತರು ಬಡ್ಡಿಯನ್ನು ಏನು ಕೊಡುತ್ತಿದ್ದಾರೋ ಅದರೊಳಗೆ ಕೆಲವೊಂದು ಪರ್ಸೆಂಟೇಜ್ ಜಿಲ್ಲಾ ಕೇಂದ್ರ ಬ್ಯಾಂಕ್, ಕೆಲವೊಂದು ಪರ್ಸೆಂಟೇಜ್ ಆಪೆಕ್ಸ್ ಬ್ಯಾಂಕ್‌ನವರು ಇಟ್ಟುಕೊಳ್ಳುತ್ತಾರೆ. ಇವುಗಳಿಗಿಂತ ಬಹಳ ಕಡಿಮೆ ಲಾಭವನ್ನು ಹಳ್ಳಿಯ ಸೊಸೈಟಿಯವರು ಇಟ್ಟುಕೊಳ್ಳಬೇಕಾಗಿದೆ. ಹಳ್ಳಿಯ ಸಹಕಾರ ಸಂಘಗಳು ನೂರಕ್ಕೆ 50ರಷ್ಟು ಹೆಚ್ಚು ಲಾಸ್‌ನಲ್ಲಿ ನಡೆಯುತ್ತಿವೆ. ಸರ್ಕಾರದವರು ಇವುಗಳಿಗೆ ಲಾಭದಲ್ಲಿ ಹೆಚ್ಚು ಪರ್ಸೆಂಟೇಜ್ ಬರುವ ಹಾಗೆ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಆರ್.ಎಲ್. ಜಾಲಪ್ಪ.—ಈ ಎರಡು ಬ್ಯಾಂಕುಗಳಿಗಿಂತ ಹೆಚ್ಚು ಮಾರ್ಜಿನಲ್ ಪ್ರಾಫಿಟ್ಸ್‌ನ್ನು ಪ್ರಾಥಮಿಕ ಸೊಸೈಟಿಯವರು ಇಟ್ಟುಕೊಂಡಿದ್ದಾರೆ. ಸುಮಾರು ಎರಡೂವರೆ ಪರ್ಸೆಂಟ್ ಹೆಚ್ಚು ಕೊಟ್ಟಿದ್ದೇವೆ. ಇದನ್ನು ಹೆಚ್ಚಾಗಿ ಮಾಡುವುದಕ್ಕೆ ಬರುವುದಿಲ್ಲ ಆದರೂ ವಿಚಾರ ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ವಿಚಾರ ಮಾಡೋಣ.

ಶ್ರೀ ದೊಡ್ಡಬೋರೇಗೌಡ.—ಹಳ್ಳಿಗಳಲ್ಲಿ ರೈತರ ಬಡತನವನ್ನು ಹೋಗಲಾಡಿಸಬೇಕು ಎನ್ನುವ ಸದುದ್ದೇಶದಿಂದ ಅವರಿಗೆ ಹೆಚ್ಚಿನ ಬಡ್ಡಿಯ ಭಾಗವನ್ನು ಕೊಡುವ ವಿಷಯದಲ್ಲಿ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಆರ್.ಎಲ್. ಜಾಲಪ್ಪ.—ಹೊಸ ಸರ್ಕಾರದ ಆದೇಶದ ಮೇರೆಗೆ ಹಳ್ಳಿಯಲ್ಲಿ ಯಾರಾದರೂ ಸಾಲ ತೆಗೆದುಕೊಂಡು ಸಕಾಲದಲ್ಲಿ ವಾಪಸ್ ಕೊಡುತ್ತಾರೋ ಅವರಿಗೆ ಏಳೂವರೆ ಪರ್ಸೆಂಟ್ ಚಾರ್ಜ್ ಮಾಡಿ ಆಷ್ಟಕ್ಕೆ ಅವರಿಗೆ ಹಣವನ್ನು ಮತ್ತೆ ಒದಗಿಸಿಕೊಡುತ್ತಿದ್ದೇವೆ. ಇಡೀ ರಾಷ್ಟ್ರದಲ್ಲಿಯೇ ಇಂಥ ವ್ಯವಸ್ಥೆ ಎಲ್ಲಿಯೂ ಇಲ್ಲ. ಇನ್ನೂ ಹೆಚ್ಚಿನ ಕ್ರಮವನ್ನು ರೈತರ ಬಗ್ಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಸಹಕಾರ ಸಂಘಗಳ ಸೆಕ್ರೆಟರಿಯವರ ಸಂಬಳಗಳನ್ನು ಹೆಚ್ಚಿಸಬೇಕು ಎಂದು ಮೇಲಿಂದ ಮೇಲೆ ಹೇಳುತ್ತಿದ್ದರೂ ಸಹ ತಾವು ಅದನ್ನು ನಿರ್ಲಕ್ಷ್ಯ ಮಾಡಿದ್ದೀರಿ. ಮುಂದೆ ಯಾದರೂ ಇದರ ಬಗ್ಗೆ ತಾವು ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್.ಎಲ್. ಜಾಲಪ್ಪ.—ನಾವು ಅವರ ಬಗ್ಗೆ ನಿರ್ಲಕ್ಷತೆಯಿಂದ ಇಲ್ಲ. ಇದರ ಬಗ್ಗೆ 23-6-83ರಲ್ಲಿ ರಿವೈಸ್ ಆರ್ಡರ್ ಮಾಡಿ ಅವರಿಗೆ ಹೆಚ್ಚಿನ ಸಂಬಳವನ್ನು ಕೊಟ್ಟಿದ್ದೇವೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರಿಗೆ 6-8-83 ರಲ್ಲಿ ರಿವೈಸ್ ಮಾಡಿಕೊಟ್ಟಿದ್ದೇವೆ. ನಿರ್ಲಕ್ಷ್ಯ ಏನೂ ಮಾಡಿಲ್ಲ. ಇವರ ಸಂಬಳ ಸಾರಿಗೆಗಳನ್ನು ಇಲ್ಲಿ ಎಷ್ಟು ಆದಾಯ ಬರುತ್ತದೋ ಆದನ್ನು ನೋಡಿಕೊಂಡು ಹೆಚ್ಚು ಮಾಡುವುದಕ್ಕೆ ನೋಡಬೇಕು. ನಾವು ಹಣವನ್ನು ಹೆಚ್ಚು ಕೊಡಬೇಕು ಎಂದರೆ ಅವರಿಗೆ ಸಂಬಳ ಕೊಡುವುದಕ್ಕೆ ಹಣ ಬೇಕು. ನಮ್ಮಲ್ಲಿ ಹೆಚ್ಚು ಜನರು ಸಹಕಾರಿ ಸಂಘಗಳು ಸರ್ಕಾರಿ ಸಂಘಗಳು ಎಂದು ತಿಳಿದುಕೊಂಡಿದ್ದಾರೆ. ಇದರಿಂದ ಇಂಥ ಪ್ರಶ್ನೆಗಳು ಇಲ್ಲಿ ಉದ್ಭವವಾಗುತ್ತಿವೆ. ಇವು ಸ್ವಾಯತ್ತ ಸಂಸ್ಥೆಗಳು ಎಂದು ನಾವು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಬಿ. ಬೈರಪ್ಪಾಜಿ.—2, 3, 4 ಪಂಚಾಯತಿಗಳನ್ನು ಸೇರಿಸಿ ಒಂದೊಂದು ಸೊಸೈಟಿಯನ್ನು ಮಾಡಿದ್ದಾರೆ. ಇದು ಸರಿಯಲ್ಲ, ಒಂದು ಪಂಚಾಯತಿಗೆ ಒಂದು ಸೊಸೈಟಿಯನ್ನು ಮಾಡುವಂಥ ಕ್ರಮವನ್ನು ತಾವು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಎರಡನೆಯದು, ಸೊಸೈಟಿಯ ಕಾರ್ಯದರ್ಶಿಯವರಿಗೆ ಪೂಲ್ ಕಮಿಟಿಯಿಂದ ಹಣ ಕೊಡುತ್ತಿದ್ದು ಜಿಲ್ಲಾ ಬ್ಯಾಂಕ್ ಮೂಲಕ ಪ್ರಾಥಮಿಕ ಸೊಸೈಟಿಯವರು ಕೊಡುತ್ತಿದ್ದಾರೆ. ಇದು ಅತ್ಯಲ್ಪ. ಸೊಸೈಟಿಗಳು ಏನೋ ಸ್ವಾಯತ್ತತೆಯನ್ನು ಹೊಂದಿದ ಸಂಸ್ಥೆಗಳು ಆದರೆ ಅವುಗಳನ್ನು ಹಾಗೆಯೇ ಬಿಡಬೇಕು ಮತ್ತು ಬೆಳಸಿಕೊಂಡು ಬರಬೇಕು. ಇದು ಆಗುತ್ತಿಲ್ಲ. ಇವುಗಳಲ್ಲಿ ಮಾರ್ಪಾಟುಮಾಡಿ ಇನ್ನೂ ಎಕ್ಸ್‌ಪರಿಮೆಂಟಲ್ ಸ್ಟೇಜ್‌ನಲ್ಲಿಯೇ ಇವೆ. ಈ ದೃಷ್ಟಿಯಿಂದ ಪಂಚಾಯತಿಗೆ ಒಂದೊಂದು ಸೊಸೈಟಿಮಾಡಿ ಜನಗಳಿಗೆ ಸೌಲಭ್ಯಗಳನ್ನು ಒದಗಿಸತಕ್ಕ ರೀತಿಯಲ್ಲಿ ಕೆಲಸ ಮಾಡಬೇಕು. ಕಾರ್ಯದರ್ಶಿಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ ಅವರಿಗೆ ಹೆಚ್ಚು ಸಂಬಳವನ್ನು ಕೊಡತಕ್ಕಂಥ ವ್ಯವಸ್ಥೆ ಸರ್ಕಾರ ಮಾಡುತ್ತದೆಯೇ ?

ಶ್ರೀ ಆರ್.ಎಲ್. ಜಾಲಪ್ಪ.—ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಹೊಸ ಸರ್ಕಾರ ಬಂದ ಮೇಲೆ ಅವರುಗಳ ವೇತನವನ್ನು ಪುನರ್ವಿಮರ್ಶೆ ಮಾಡಿದ್ದೇವೆ. ಇದನ್ನು ನಾನು, ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದೇನೆ. ಒಬ್ಬ ಕಾರ್ಯದರ್ಶಿಗೆ 5 ಸಾವಿರ ರೂಪಾಯಿಗಳ ಸಂಬಳ ಆದರೆ ಸೊಸೈಟಿಗಳವರು ಎಲ್ಲಿಂದ ಕೊಡಬೇಕು ? ಈಗ 3-4 ಪಂಚಾಯಿತಿಗಳನ್ನು ಸೇರಿಸಿ ಸಹಕಾರ ಸಂಘ